ಸದ್ಯದ ಕಡಿತಗಳನ್ನು ಒಳಗೊಂಡ ಈ ಕಾರ್ಖಾನೆಗೆ ಮಂಡಳಿಯು ಒದಗಿಸುತ್ತಿರುವ ವಿದ್ಯುತ್ ವಿವರ : ೩೪೯೭೫ ಕಿ.ವಾಟ್‌ಗಳು (ಶೇ. ೭೫ ವಿಧಿಸಿರುವ ಕಡಿತ) ೩೩.೭೫ ವಿಂ. ಯೂನಿಟ್ಸುಗಳು (ಶೇ. ೬೫ ರಂತೆ ವಿಧಿಸಿರುವ ಕಡಿತ)

೨ ಹರಿಹರ ಪಾಲಿಫೈಬರ್ ಕಾರ್ಖಾನೆ :

ಕಾಂಟ್ರಾಕ್ಟ್ ಡಿಮ್ಯಾಂಡ್ : ೨೦೨೦೬೫ ಕೆ. ವಿ. ಎ. ಸದ್ಯದ ಕಡಿತವನ್ನು ಒಳಗೊಂಡ ಈ ಕಾರ್ಖಾನೆಗೆ ಮಂಡಳಿಯು ಒದಗಿಸುತ್ತಿರುವ ವಿದ್ಯುತ್ ವಿವರ.
೯೧೨೦ ಕೆ. ವಿ. ಎ. (೩೩ ೧/೩ ಶೇ. ಕಡಿತ)
೪.೮೯ ಎಂ. ಯು. ವಿಲಿಯನ್ ಯೂನಿಟ್ಸುಗಳು. (೩೩. ೧/೩ ಶೇ. ಕಡಿತ)
ಬಟ್ಟೆ ಗಿರಣಿಯಾದುದರಿಂದ.
ಮೇಲಿನ ಕಾರ್ಖಾನೆಗಳಿಗೆ, ಇತರೇ ಹೆಚ್. ಟಿ. ಕಾರ್ಖಾನೆಗಳಿಗೆ ಒದಗಿಸುತ್ತಿರುವ ದರದಲ್ಲಿ ಅಂದರೆ ಯೂನಿಟ್ಟಿಗೆ ೩೦ ಪೈಸೆ ಮತ್ತು ಡಿಮ್ಯಾಂಡ್ ಚಾರ್ಜ್ ಕೆ. ವಿ. ಎ. ಒಂದಕ್ಕೆ ತಿಂಗಳಿಗೆ ೩೦ ರೂ.ಗಳಂತೆ ದರ ಹಾಕಲಾಗಿದೆ.

ಚೆನ್ನಪಟ್ಟಣದ ಸಬ್ ರಿಜಿಸ್ಟ್ರಾರ್‌ರವರ ವಿರುದ್ಧ ದೂರು

೪೩೦ (೧೭೦೩) ಶ್ರೀ ಎಂ. ವರದೇಗೌಡ.—(ಚನ್ನಪಟ್ಟಣ) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ಸಬ್‌ರಿಜಿಸ್ಟ್ರಾರ್‌ರವರ ವಿರುದ್ಧ ದೂರೇನಾದರೂ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಹೌದು

ಆ) ಜಾಗೃತ ಆಯೋಗದವರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (ವಿಂಗಡಣೆ ನಿಯಂತ್ರಣ, ಮತ್ತು ಮನವಿ) ೧೯೫೭ರ ಕೆಳಗೆ ಇಲಾಖಾ ತನಿಖೆ ಮಾಡಲು ಈಗಾಗಲೇ ಕ್ರಮ ತಕ್ಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ.

ಬೆಂಗಳೂರು ಉತ್ತರ ತಾಲ್ಲೂಕು ದೇವರಜೀವನಹಳ್ಳಿ ಮತ್ತು ಲಿಂಗರಾಜಪುರ ಗ್ರಾಮಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತ.

೪೩೧ (೧೫೪೬) ಶ್ರೀ ವಿ. ಶ್ರೀನಿವಾಸನ್ (ಯಲಹಂಕ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರತ ಸರಕಾರವು ಪಟ್ಟಣ ಅಭಿವೃದ್ಧಿಗಾಗಿ ಬೆಂಗಳೂರು ಉತ್ತರ ತಾಲ್ಲೂಕು ದೇವರ ಜೀವನಹಳ್ಳಿ ಮತ್ತು ಲಿಂಗರಾಜಪುರ ಗ್ರಾಮದ ಅಭಿವೃದ್ಧಿಗಾಗಿ ೧೯೭೭ರಲ್ಲಿ ಎರಡು ಕೋಟಿ ರೂಪಾಯಿ ಹಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಟ್ಟಿರುವುದು ನಿಜವಲ್ಲವೆ, ಹಾಗಿದ್ದಲ್ಲಿ ಈ ಹಣವು ಪೂರ್ತಾ ಖರ್ಚಾಗಿದೆಯೇ ಹಾಗಿಲ್ಲದಿದ್ದಲ್ಲಿ. ಬಾಕಿ ಎಷ್ಟು ಉಳಿದಿದೆ ಹಾಗೂ ಇದನ್ನು ಖರ್ಚು ಮಾಡದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿಂಗಳು ಉಳಿಸಿಕೊಂಡಿರಲು ಕಾರಣವೇನು ?

ಆ) ಉಳಿದಿರುವ ಹಣದಿಂದ ಸದರಿ ಗ್ರಾಮಗಳನ್ನು ತ್ವರಿತವಾಗಿ ಅಭಿವೃದ್ಧಿಗೊಳಿಸಲಾಗುವುದೇ ?